198

ಹಾಸನ ಸಬ್ ಡಿವೀಜ್ ಆಫೀಸ್.

ತಾರೀಖು 29ನೇ ಫಿಬ್ರವರೀ 1884.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ದಿವಾಣ ಸಾಹೆಬರವರ ಹುಕ್ಕುಂ ಬನೋಜೀಫ್, ಹಾಸನ ಸಬ್ ಡಿವೀಜ್ ಪೈಕೀ ಮಂಜರಾಬಾದ್ ತಾಲ್ಲೂಕಿನಲ್ಲಿ ಯಿರುವ ಮೂರ್ನಹಳ್ಳಿ ಫಾಟೀಯಲ್ಲಿ ಟೋಲ್ ಗೇಟ್ ಯೆಂಬ ಸುಂಕದಕಟ್ಟೆ ವಳಗೆ ಸ್ ೧೮೮೪ನೇ ಇಸವಿ ಏಪ್ರೆಲ್ ಮಾಹೆ 1ನೇ ಮುಕ್ತುಂ ಲಾಗಾಯತು, 1885ನೇ ಇಸವಿ ಮಾರ್ಚೀ 31ರ ವರಿಗೆ ಸುಂಕ ವಸೂಲ್ ಮಾಡುವ ಸ್ವತಂತ್ರವು, ಸ್ ೧೮೮೪ನೇ ಇಸವಿ ಮಾರ್ಚೀ ತಾರೀಖು 26ರಲ್ಲು ಕಸಬಾ ಸಕ್ಕೇಶಪುರದ ಮೊಕ್ತಾಂ ತಾಲ್ಲೂಕು ಕಚೇರಿಯೊಳಗೆ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ.

2. ವಸೂಲಿ ಹಕ್ಕನ್ನು ಕೊಂಡುಕೊಳ್ಳುವ ಕಂಟ್ರಾಕ್ಟುದಾರನು ಇದಕ್ಕೆ ಲಗ್ಗತ್ತಾಗಿ ಯಿರುವ ಷೆಡ್ಯೂಲ್‌ನಲ್ಲಿ ನಮೂದಾಗಿ ಯಿರುವ ದರಗಳ ಮೇರಿಗೇನೇ ಟೋಲ್ ವಸೂಲ್ ಮಾಡಬೇಕು. ಮತ್ತು ಸ್ ೧೮೭೬ನೇ ಇಸವಿ ನವಂಬರ್ 4ನೇ ಮುಕ್ತುಂ 274ನೇ ನಂಬರ್ ವುಳ್ಳ ಲೇಟ್ ಚೀಫ್ ಕಮ್ಮಿಷನರ್ ಸಾಹೆಬರವರ ನೋಟಿಫಿಕೇಷ್ಯನಲ್ಲಿ ಫಾಯಿಷ್ ಆಗಿ ಇರುವ ರೂಲ್ಸ್ ಪ್ರಕಾರ ನಡದುಕೊಳ್ಳಬೇಕು.

3. ಚಡ ದರಖಾಸ್ತನ್ನಾಗಲಿ, ಯಾವ ದರಖಾಸ್ತನ್ನಾಗಲಿ, ಅಂಗೀಕರಿಸುವದಕ್ಕೆ ಯಾ ತಿರಸ್ಕರಿಸುವದಕ್ಕೆ ಹಾಸನ ಸಬ್‌ಡಿವೀಜ್ ಆಫೀಸರವರು ಅಧಿಕಾರ ವುಳ್ಳವರಾಗಿರುತ್ತಾರೆ.

4. ಯಾವ ದರಖಾಸ್ತು ಅಂಗೀಕರಿಸಲ್ಪಡುತದೆಯೋ ಅವನು ಕೂಡ್ಲೆ ದರಖಾಸ್ತು ಮೊಬಲಗಿನಲ್ಲಿ ನಾಲ್ಕರಲ್ಲಿ ವಂದಂಶ ಮೊಬಲಗನ್ನು ಅಡ್ವಾನಸಾಗಿ ಶೇವಣಿ ಇಟ್ಟು ಬಾಕೀ ಮೊಬಲಗನ್ನು 1884ನೇ ಇಸವಿ ಏಪ್ರೆಲ್ 20ರ ಲಾಗಾಯತು ಸಮನಾದ ಆರು ಖಿಸ್ತುಗಳಾಗಿ ಪ್ರತಿ ತಿಂಗಳು 20ನೇ ತಾರೀಖಿಗೆ ಪಾವತೀ ಮಾಡಬೇಕು. ದರಖಾಸ್ತುದಾರನು ಪ್ರತಿ ಮಾಹೆವಾರೀ ಖಿಸ್ತು ಮೊಬಲಗನ್ನು ತಪ್ಪದೆ ಕೊಡುತ್ತಾ ಬರುವದಕ್ಕೆ ಲಾಯಖಾದ ವಬ್ಬನನ್ನು ಜಾಮೀರ್ ಕೊಡಬೇಕು.

5. ಶೇವಣಿ ಯಿಡದೆ ಯಿದ್ದರೆ ಅಥವಾ ಜಾಮೀರ್ ಕೊಡದೆ ಇದ್ದರೆ ದರಖಾಸ್ತುದಾರನಿಗೆ ಲುಕ್ಸಾನ್ ಕರವಾಗಿ ಕಂಟ್ರಾಕ್ಟು ಎರಡನೇ ಹರಾಜು ಮಾಡಲ್ಪಡುವದು, ಖಿಸ್ತು ಪ್ರಕಾರ ಹಣ ಕೊಡುವದಕ್ಕೆ ತಪ್ಪಿದರೆ ಹಾಗೆ ಬಾಕೀ ಆದ ಮೊಬಲಗಿಗೆ ಪಾವತೀ ತಾರೀಖಿನೆವರಿಗೆ ತಿಂಗಳು 1ಕ್ಕೆ ರೂಪಾಯಿ 1ಕ್ಕೆ ವಂದು ಕಾಸಿನಂತೆ ಬಡ್ಡೀ ವಸೂಲ್ ಮಾಡಲ್ಪಡುವದು, ಮತ್ತು ಸಬ್ ಡಿವೀಜ್ ಆಫೀಸರವರು ತಮಿಗೆ ಯುಕ್ತತೋರುವ ಪ್ರಕಾರ ಅಥವಾ ಜಾಮೀರ್‌ದಾರನ ಅಪೇಕ್ಷೆ ಪ್ರಕಾರ ಕಂಟ್ರಾಕ್ಟು ಯರಡನೆ ಹರಾಜು ಮಾಡಲ್ಪಡುವದಕ್ಕೆ ಗುರಿಯಾಗತಕ್ಕದ್ದು. ಅದರಿಂದ ಯೇನಾದರು ನಷ್ಟ ಸಂಭವಿಸಿದರೆ ಅದು ಕಂಟ್ರಾಕ್ಟುದಾರನಿಂದ ಅಥವಾ ಜಾಮೀರ್‌ದಾರನಿಂದ ಕಂದಾಯದ ಬಾಕಿಯಂತೆ ವಸೂಲ್ ಮಾಡಲ್ಪಡತಕ್ಕದ್ದು.

6. ದರಖಾಸ್ತು ಮೊಬಲಗು ಕಿವಾಯಿ 4 ಮತ್ತು 5ನೇ ಕಲಂನಲ್ಲಿ ನಮೂದಾಗುವ ಪರತ್ತಿಗೆ ವಳಪಟ್ಟು ಖಜಾನೆಗೆ ಸಲಾಯಿಸುವ ಸದರೀ ಕಂಟ್ರಾಕ್ಟು ಮೊಬಲಗಿನ ರೂಪಾಯಿ ವಂದಕ್ಕೆ ವಂದಾಣೆಯಂತೆ ಲೋಕಲ್ ಸೆಸ್ ಕೊಡಲಿಕ್ಕೆ ಕಂಟ್ರಾಕ್ಟುದಾರನು ಬದ್ಧನಾಗಿ ಯಿರುತ್ತಾನೆ.

7. ಪ್ರತಿದಿನದ ಟೋಲ್ ವಸೂಲ್ ತೋರಿಸುವ ನಿಜವಾದ ಮತ್ತು ಕರಾರ್‌ವಾಕಾವಾದ ಲೆಕ್ಕವನ್ನು ಇಡಲು ಸಹಾ ಕಂಟ್ರಾಕ್ಟುದಾರನು ಬದ್ಧನಾಗಿ ಯಿರುವದಲ್ಲದೆ ಸಬ್ ಡಿವೀಜ್ ಮತ್ತು ತಾಲ್ಲೂಕು ವುದ್ಯೋಗಸ್ಥರ ಇನ್‌ಸ್ಪೆಕ್ಷ್ಯನಿಗೆ ಲೆಕ್ಕವಳಗಾಗಿ ಯಿರತಕ್ಕದ್ದು.

8. ಗವರ್ನಮೆಂಟ್ ಟೋಲ್ ಮನೆ ಮತ್ತು ಗೇಟನ್ನು ಕಂಟ್ರಾಕ್ಟುದಾರ್ ವುಪಯೋಗಿಸತಕ್ಕದ್ದು. ಮತ್ತು ಅವುಗಳನ್ನ ಆತನು ಪೂರಾ ದುರಸ್ತಿನಲ್ಲಿ ಯಿಟ್ಟುಕೊಂಡಿರತಕ್ಕದ್ದು.

9. ಕಂಟ್ರಾಕ್ಟುದಾರನು ಪ್ರತಿ ತಿಂಗಳ ಗುರೀ ತಾರೀಖಿನಲ್ಲಿ ಹಿಂದಣ ತಿಂಗಳ ಟೋಲ್ ವಸೂಲಿ ಲೆಕ್ಕವನ್ನ ಮಂಜರಾಬಾದ್ ತಾಲ್ಲೂಕು ಕಚೇರಿಗೆ ಕಳುಹಿಸತಕ್ಕದ್ದು.

ದರಗಳ ಪಟ್ಟಿ.

ಸ್ ೧೮೮೨ನೇ ಇಸವಿ ಮಾರ್ಚೀ 18ನೇ ಮುಕ್ತುಂ ಮೈಸೂರು ಗೆಜೆಟ್ಟಿನಲ್ಲಿ ನಮೂದಾಗಿ ಯಿರುತ್ತೆ.

ಟಿ. ಆನಂದರಾವ್,
ಸಬ್ ಡಿವೀಜ್ ಆಫೀಸರ್.